ದಿನಾಂಕ: 12.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಡಿ ಜಿ ಜಿ ವಕೀಲರಿಂದಃ**

ಕರಾರು ಪತ್ರದಲ್ಲಿ ನಿವೇಶನವು 10x30 ಇದೆ ಎಂದರೆ ನಿಜ. ಆ ನಿವೇಶನದಲ್ಲಿ ಮೇಲೆ ಕೆಳಗೆ ಕಟ್ಟಿದ ಮನೆಯು 700 ಚಿಲ್ಲರೆ ಅಡಿ ಇದೆ ಎಂದರೆ ಸಾಕ್ಷಿ ಅದನ್ನು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ 700 ಚಿಲ್ಲರೆ ಅಡಿ ಇದೆ ಎಂದು ನಮೂದು ಇದೆ ಎಂದರೆ ನಿಜ. ಮೆಲಿನ ಅಂತಸ್ತು 350 ಅಡಿ ಮೊದಲ ಅಂತಸ್ತು 350 ಅಡಿ ಇದೆ ಎಂದರೆ ನಿಜ.ಆ ನಿವೇಶನ ಮೊದಲು ಅಲವೇಲಮ್ಮ ಬಿನ್ ಕೊಲ್ಲಾಭೋವಿ ಇವರ ಹೆಸರಿಗೆ ಇತ್ತು ಎಂದರೆ ನಿಜ. ಅಲವೇಲಮ್ಮ ನನ್ನ ತಾಯಿ ಆಗಿದ್ದರಿಂದ ಆ ಆಸ್ತಿ ನನ್ನ ತಾಯಿ ಪೌತಿಯಾದ ನಂತರ ಪೌತಿ ವಾರಸು ಮೂಲಕ ನನ್ನ ಹೆಸರಿಗೆ ಬಂದಿರುತ್ತದೆ. ಆಸ್ತಿ ಎಷ್ಟು ಬೆಲೆ ಬಾಳುತ್ತದೆ ಎಂದು ತೋರಿಸಲು ನಾನು ದಾಖಲಾತಿ ಹಾಜರು ಪಡಿಸಿರುವುದಿಲ್ಲ. ದಿಃ12.02.2013 ರಂದು ಸ್ವಾಮಿಯಪ್ಪನವರಿಗೆ ಮಾರಾಟ ಮಾಡಲು ದಾವಾಸ್ತಿಯನ್ನು ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನಗೆ ಹಣದ ಅವಶ್ಯಕತೆ ಇದ್ದುದ್ದರಿಂದ ಪತ್ರ ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತರೆ. ಆ ದಾಖಲೆಯಲ್ಲಿ ಆಸ್ತಿಯ ಬೆಲೆ ರೂ.5 ಲಕ್ಷ 10 ಸಾವಿರ ಎಂದು ನಮೂದು ಮಾಡಿದ್ದೇವೆ ಎಂದರೆ ನಿಜ. ನಾನು ಸ್ವಾಮಿಯಪ್ಪನಿಗೆ ಕ್ರಯ ಪತ್ರ ಮಾಡಿಕೊಟ್ಟಿಲ್ಲ ಎಂದರೆ ನಿಜ ಸಾಕ್ಷಿ ಮುಂದುವರೆದು ಆ ಕರಾರನ್ನು ಹಣ ಕೊಟ್ಟು ರದ್ದು ಪಡಿಸಿದ್ದೇನೆ ಎಂದು ಹೇಳುತ್ತಾರೆ. ದಿಃ14.05.2013 ರಂದು ಸ್ವಾಮಿಯಪ್ಪನವರಿಗೆ ಪುನಃ ಒಂದು ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ನಿಜ. ಸಾಕ್ಷಿ ಮುಂದುವರೆದು 11 ತಿಂಗಳಲ್ಲಿ ನಾನು ಹಣ ಹಿಂತಿರುಗಿ ಕೊಟ್ಟು ರದ್ದು ಪಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ವಾದಿಗೆ ನಾನು ಹಣ ಕೊಟ್ಟು ರದ್ದು ಪಡಿಸಿಕೊಂಡ ಕುರಿತು ದಾಖಲಾತಿ ಹಾಜರು ಪಡಿಸಿಲ್ಲ.

ದಿಃ28.08.2013 ಕ್ಕೆ ಆಸ್ತಿಯನ್ನು ಮಾರಾಟ ಮಾಡಲು ಇನ್ನೊಂದು ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ಪತ್ರದಲ್ಲಿ ಕೂಡ ದಾವಾಸ್ತಿಯ ಬೆಲೆ ರೂ5 ಲಕ್ಷ 5 ಸಾವಿರ ಎಂದು ನಮೂದು ಇದೆ ಎಂದರೆ ನಿಜ. ಸಾಕ್ಷಿ ಮುಂದು ವರೆದು ಅವರು ಬರೆದುಕೊಂಡಿದ್ದಾರೆ ಆದರೆ ಮಾರಾಟ ಮಾಡಲು ಅಲ್ಲ ಎಂದು ನುಡಿಯುತ್ತಾರೆ. ಸಾಲದ ಸಲುವಾಗಿ ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದು ಮೂರು ಕರಾರು ಪತ್ರದಲ್ಲಿ ನಮೂದಿಸಲು ನನಗೆ ತೊಂದರೆ ಇರಲಿಲ್ಲ.

ದಿಃ21.04.2014 ರಲ್ಲಿ ಬರೆದುಕೊಟ್ಟ ಕಾರಾರಿನಲ್ಲಿ ಸಾಲಕ್ಕೋಸ್ಕರ ಕರಾರು ಬರೆದುಕೊಟ್ಟಿದ್ದೇನೆ ಎಂದು ನಮೂದಿಸಲು ನನಗೆ ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರೆದು ಸಾಲಕ್ಕೋಸ್ಕರ ಬರೆದುಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ದಾವಾಸ್ತಿಗೆ ರೂ.50 ಲಕ್ಷ ಬೆಲೆಬಾಳುತ್ತದೆ ಎಂದುತೋರಿಸಲು ಯಾವುದೇ ದಾಖಲೆ ಇಲ್ಲ. ಸಾಕ್ಷಿ ಮುಂದುವರೆದು ಜನಗಳು ಹೇಳುತ್ತಾರೆ ಎಂದು ನುಡಿಯುತ್ತಾರೆ. 2013 ರಲ್ಲಿ ಕೂಡ ನನ್ನ ಮಗಳ ಪರವಾಗಿ ನಾನೇ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ನಾನು 4 ಕ್ರಯದ ಕರಾರು ಪತ್ರಗಳಲ್ಲಿ ಆಸ್ತಿ ಯ ಬೆಲೆ ರೂ 5 ಲಕ್ಷ 10 ಸಾವಿರಕ್ಕಿಂತ ಹೆಚ್ಚಿನ ಮೌಲ್ಯವನ್ನು ನಮೂದಿಸಿಲ್ಲ ಎಂದರೆ ಸರಿ. ದಿಃ21.04.2014 ರ ನಂತರ ವಾದಿಗೆ ಬೇರೆ ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲ ಬೇರೆ ಯಾರಿಗೂ ಕೂಡ 21.04.2014 ರ ನಂತರ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ಕರಾರು ಪತ್ರ ಬರೆದುಕೊಟ್ಟಿಲ್ಲ. ದಾವಾಸ್ತಿಯ ಮೇಲೆ ಈ ದಾವೆಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾವೆ ಇಲ್ಲ ಎಂದರೆ ನಿಜ.

ಯಾವುದೇ ಒಂದು ದಾಖಲೆಗೆ ಸಹಿ ಮಾಡುವ ಪೂರ್ವದಲ್ಲಿ ನಾನು ದಾಖಲೆಯನ್ನು ಓದಿ ತಿಳಿದು ಸಹಿ ಮಾಡುತ್ತೇನೆ. ನಿಪಿ-1 ರಲ್ಲಿರುವ ಪೊಟೋಗಳು ನನ್ನದು ಮತ್ತು ನನ್ನ ಮಗಳದ್ದು ಎಂದರೆ ನಿಜ. ನಿಪಿ-1(ಡಿ) 1(ಇ) 1(ಎಫ್ ) ಸಹಿ ನನ್ನದಾಗಿರುತ್ತದೆ. ನಿಪಿ-1(ಜಿ) 1(ಹೆಚ್)

1(ಐ) ಸಹಿ ನನ್ನ ಮಗಳದಾಗಿರುತ್ತದೆ. ನಿಪಿ-1 ಕ್ಕೆ ನಾವು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಸಹಿ ಮಾಡಿ ಫೋಟೋ ತೆಗೆಸಿಕೊಂಡಿದ್ದೇವೆ ಎಂದರೆ ನಿಜ. ನಿಪಿ-1 ಕ್ಕೆ ಸಹಿ ಮಾಡುವ ಪೂರ್ವದಲ್ಲಿ ಅದರಲ್ಲಿರುವ ಸಂಗತಿಗಳನ್ನು ಓದಿ ತಿಳಿದು ಸಹಿ ಮಾಡಿರುತ್ತೇನೆ. ನಿಪಿ-1 ರ ಕರಾರು ನನ್ನ ಸಂಪೂರ್ಣ ಸಮ್ಮತಿ ಮೇರೆಗೆ ಹಿರಿಯೂರು ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೊಂದಾವಣೆ ಆಗಿದೆ ಎಂದರೆ ನಿಜ. ನಿಪಿ-1 ರಲ್ಲಿರುವಂತಹ ಶರತ್ತಿಗೆ ನಾನು ಮತ್ತು ವಾದಿಯರು ಬದ್ದರಾಗಿರುತ್ತೇವೆ ಎಂದರೆ ನಿಜ.

ವಕೀಲರು ಪ್ರತ್ಯುತ್ತರ ಕೊಡುವ ಸಮಯದಲ್ಲಿ ವಕೀಲರಿಗೆ ನಾನು ಹೋಗಿ ಮಾಹಿತಿ ಕೊಟ್ಟಿರುತ್ತೇನೆ. ವಾದಿ ನೀಡಿದ ನಿಪಿ-6 ರ ನೋಟೀಸಿಗೆ ನಾನೇ ಸಹಿ ಮಾಡಿ ವಕೀಲರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಆ ನೋಟೀಸ್ ನಲ್ಲಿ ಹಿಂದೆ 2013 ರಲ್ಲಿ ಮೂರು ಭಾರಿ ಕರಾರು ಪತ್ರ ಬರೆದ ವಿಚಾರವನ್ನು ತಿಳಿಸಿರುತ್ತೇವೆ. ಹಿಂದೆ ಬರೆದಕರಾರು ಪತ್ರ ಗಳ ಪ್ರತಿಗಳನ್ನು ಆ ಸಮಯದಲ್ಲಿ ನಾನು ನಮ್ಮ ವಕೀಲರಿಗೆ ನೀಡಿರುವುದಿಲ್ಲ.

ಪ್ರತಿವಾದ ಪತ್ರ ವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ ನನ್ನ ಮಗಳು ಆ ಸಮಯದಲ್ಲಿ ಬಂದಿರುವುದಿಲ್ಲ. ಪ್ರತಿವಾದ ಪತ್ರ ಸಲ್ಲಿಸುವಾಗ ಸಾಲ ತೀರುವಳಿಯಾಗಿದೆ ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಮಾಹಿತಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಗೆ ಹಣ ಕೊಟ್ಟ ಬಗ್ಗೆ ನಾನು ದಾಖಲೆಗಳನ್ನು ಬರೆಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಂಬಿಕೆ ಮೇಲೆ ಕೊಟ್ಟಿದ್ದೇನೆ ಸಾಕ್ಷಿದಾರರ ಮುಂದೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲಿ ಬಾಡಿಗೆ ಇದ್ದ ಸುನಿತಾ ರವರ ಮುಂದೆ ಹಣವನ್ನು ವಾದಿಗೆ ಕೊಟ್ಟಿರುತ್ತೇನೆ. ಯಾವ ದಿನಾಂಕ ಹಣ ಕೊಟ್ಟಿದ್ದೆ ಎಂದು ದಿನಾಂಕ ನೆನಪಿಲ್ಲ. ನನ್ನ ಸ್ವಂತ ಮನೆಯಾದ ದಾವಾಸ್ತಿಯಲ್ಲಿ ಹಣವನ್ನು ಪಾವತಿಸಿರುತ್ತೇನೆ. ವಾದಿಗೆ ಯಾವ ಮುಖ ಬೆಲೆಯ ಮೌಲ್ಯದ ಹಣವನ್ನು ಪಾವತಿಸಿದ್ದೇನೆ ಎಂದು ನನಗೆ ನೆನಪಿಲ್ಲ. ವಾದಿಗೆ ರೂ.5 ಲಕ್ಷ

ಅಸಲು ಮತ್ತು 36 ರಿಂದ 37 ಸಾವಿರ ಬಡ್ಡಿಯನ್ನು ಕೊಟ್ಟಿರುತ್ತೇವೆ. ಆ ರೀತಿ ಹಣ ನೀಡಿದ ಬಗ್ಗೆ ವಾದಿಯಿಂದ ಯಾವುದೇ ರಸೀದಿ ಪಡೆದು ಕೊಳ್ಳಲು ನನಗೆ ತೊಂದರೆ ಇರಲಿಲ್ಲ. ವಾದಿ ಮುಂದುವರೆದು ನಂಬಿಕೆ ಮೇಲೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ವಾದಿಗೆ ಸಾಲದ ಬಾಬ್ತು ನಿಪಿ-1 ನ್ನು ಬರೆದುಕೊಟ್ಟಿಲ್ಲ, ಆಸ್ತಿಯನ್ನು ಮಾರಾಟ ಮಾಡುವ ಬಾಬ್ತು ನಿಪಿ-1 ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ ಮೂರು ಭಾರಿ ಕರಾರು ಪತ್ರವನ್ನು ನಿಮಗೆ ಬರೆದುಕೊಟ್ಟಿದ್ದೇನೆ, ಆದ್ದರಿಂದ ನೀವೆ ಖರೀದಿ ಮಾಡಿ ಬೇರೆಯವರಿಗೆ ಮಾರಾಟ ಮಾಡಲು ಇಷ್ಟವಿಲ್ಲ ಎಂದು ನಾನು ಹೇಳಿ ವಾದಿಗೆ ನಿಪಿ-1 ನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕರಾರು ಪತ್ರದಲ್ಲಿ ವಾದಿಗೆ ಕ್ರಯ ಪತ್ರವನ್ನು ಬರೆದುಕೊಡಲು ಬಾಧ್ಯಳು ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಸುಳ್ಳು ಪ್ರತ್ಯುತ್ತರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಕರಾರು ಪತ್ರ ಬರೆದುಕೊಟ್ಟಿದ್ದರೂ ಸಹ ಸಾಲದ ಭದ್ರತೆಗಾಗಿ ಬರೆದುಕೊಟ್ಟಿದ್ದೇನೆ ಎಂದು ಸುಳ್ಳು ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರವನ್ನು ಬರೆದುಕೊಡುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ವಾದಿಗೆ ಮೋಸ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು